(ಇಂದು ದಿನಾಂಕಃ 22–09–2025 ರಂದು ಸಾಕ್ಷಿಯನ್ನು ತೆರೆದ ನ್ಯಾಯಾಲಯಕ್ಕೆ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.)

ಮುಂದುವರೆದ ಪಾಟೀಸವಾಲು ಃ ಶ್ರೀ ಎಂ ಬಿ ವಿ ವಕೀಲರಿಂದ ಃ -

7) ಈ ಹಿಂದೆ ದಾಖಲು ನನ್ನ ಹೆಂಡತಿ ಕಡೆಯಿಂದ ದಾಖಲು ಮಾಡಿದ ಅಸಲು ದಾವಾ ಸಂಖ್ಯೆ 55/2011 ರ ಬಗ್ಗೆ ನನಗೆ ಗೊತ್ತಿಲ್ಲ. ಸಾಕ್ಷಿಗೆ ಈಗ ಒಂದು ವಾದ ಪತ್ರದ ದೃಡಿಕೃತ ಪ್ರತಿಯನ್ನು ತೋರಿಸಿ ಸದರಿ ದಾವೆಯನ್ನು ನಾನು ದಿನಾಂಕ 28-04-2011 ರಂದು ನನ್ನ ಹೆಂಡತಿಯ ಮೌಕ್ತಿಯಾರನ್ನು ಪಡೆದು ಸಲ್ಲಿಸಿರುತ್ತೇನೆ ಎಂದರೆ ನೆನಪಿಲ್ಲ. ಸದರಿ ದೃಡಿಕೃತ ಪ್ರತಿಯನ್ನು <u>ನಿ.ಡಿ.**2**</u> ಎಂದು ಗುರುತಿಸಲಾಯಿತು. ಸಾಕ್ಷಿಗೆ ಈಗ ನಿಡಿ-2 ನ್ನು ತೋರಿಸಿ ಅದರಲ್ಲಿ ಆಸ್ತಿಯ ವಿವರಣೆಯನ್ನು ನಮೂದು ಮಾಡಿರುತ್ತೇನೆ ಎಂದರೆ ಸಾಕ್ಷಿಯು ನನಗೆ ಕಾಣುತ್ತಿಲ್ಲ ಎಂದು ನುಡಿಯುತ್ತಾರೆ.

8) ಅಸಲು ದಾವಾ ಸಂಖ್ಯೆ 55/2011 ರಲ್ಲಿ ದಾವಾ ಆಸ್ತಿಯ ವಿವರಣೆಯಲ್ಲಿ ಆಸ್ತಿಯನ್ನು ಖುಲ್ಲಾ ಆಸ್ತಿ ಎಂದು ನಮೂದು ಮಾಡಿರುತ್ತೇನೆ ಎಂದರೆ ನನಗೆ ನೆನಪಿಲ್ಲ. ಪ್ರತಿವಾದಿಯರು ದಿನಾಂಕ 28-01-2022 ರಂದು ಪರವಾನಿಗೆ ಪಡೆದು ಕಟ್ಟಡ ನಿರ್ಮಾಣ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಗೆ ಈಗ ಒಂದು ರಶೀದಿಯನ್ನು ತೋರಿಸಿ ಅದನ್ನು ಪ್ರತಿವಾದಿಯರು ಪರವಾನಿಗೆ ಪಡೆಯಲು ಭರಣ ಮಾಡಿದ ಶುಲ್ಕದ ರಶೀದಿ ಎಂದರೆ ಸರಿಯಲ್ಲ. ಸದರಿ ರಶೀದಿಯನ್ನು <u>ನಿ.ಡಿ.**3**</u> ಎಂದು ಗುರುತಿಸಲಾಯಿತು.

9) ಸಾಮಾನ್ಯವಾಗಿ ಪರವಾನಿಗೆ ನೀಡುವ ಪೂರ್ವದಲ್ಲಿ ಕ್ಷೇತ್ರ ಪರಿಶೀಲನೆ ಮಾಡಿ ಪರವಾನಿಗೆ ನೀಡುತ್ತಾರೆ ಎಂದರೆ ಸಾಕ್ಷಿಯು ಲಗತ್ತು ಕಬ್ಜಾದಾರರಿಗೆ ನೋಟಿಸ ನೀಡುತ್ತಾರೆ ಎಂದು ನುಡಿಯುತ್ತಾರೆ. ಪ್ರತಿವಾದಿಯರು ಅರ್ಜಿ ನೀಡಿದ ನಂತರದಲ್ಲಿ ಅಧಿಕಾರಿಗಳು ಸ್ಥಳ ಪರಿಶೀಲನೆಗೆ ಬಂದ ಸಮಯದಲ್ಲಿ ಅವರಿಗೆ ನಾನು ನ್ಯಾಯಾಲಯದಲ್ಲಿ ದಾವೆ ಚಾಲ್ತಿಯಲ್ಲಿದ್ದ ಕಾರಣ ದಾಖಲೆಗಳು ನ್ಯಾಯಾಲಯದಲ್ಲಿ ಇದ್ದು ಪರಿಶೀಲನೆ ಮಾಡಲು ಬರುವುದಿಲ್ಲ ಎಂದು ತಕರಾರು ಮಾಡಿರುತ್ತೇನೆ ಎಂದರೆ ಸರಿಯಲ್ಲ.

10) ಅಧಿಕಾರಿಗಳು ಅಳತೆ ಮಾಡಿ ಪೂರ್ವ ಪಶ್ಚಿಮ 19 ಅಡಿ ಹಾಗೂ ಉತ್ತರ ದಕ್ಷಿಣ 27 ಅಡಿ ಇದೆ ಎಂದು ಖಚಿತ ಪಡಿಸಿ ಪರವಾನಿಗೆ ನೀಡಿರುತ್ತಾರೆ ಎಂದರೆ ಲಗತ್ತು ಕಬ್ಜೆದಾರರಿಗೆ ಯಾವುದೇ ನೋಟಿಸ ನೀಡಿಲ್ಲ. ನಾನು ನನ್ನ ವಾದ ಪತ್ರದ 2 ನೇ ಕಂಡಿಕೆಯಲ್ಲಿ ಸುಳ್ಳು ಸಂಗತಿಗಳನ್ನು ನಮೂದು ಮಾಡಿಸಿರುತ್ತೇನೆ ಅಂದರೆ ಸರಿಯಲ್ಲ.

11) ನಾನು ಅಸಲು ದಾವಾ ಸಂಖ್ಯೆ 55/2011 ರಲ್ಲಿ ದಾವಾ ಆಸ್ತಿಯ ಅಳತೆಯನ್ನು ನಮೂದು ಮಾಡಿ ಪ್ರಸ್ತುತ ದಾವೆಯಲ್ಲಿ ಬೇರೊಂದು ಅಳತೆಯನ್ನು ನಮೂದು ಮಾಡಿ ನಿಖರತೆ ಇಲ್ಲದ ಅಳತೆಯನ್ನು ಮುಂದು ಮಾಡಿ ಸುಳ್ಳು ಸಂಗತಿಗಳ ಮೇರೆಗೆ ಪ್ರಸ್ತುತ ದಾವೆ ಸಲ್ಲಿಸಿರುತ್ತೇನೆ ಅಂದರೆ ಸರಿಯಲ್ಲ. ಪ್ರತಿವಾದಿಯರು ನನಗೆ ಹರಕತ್ತು ಮಾಡಿರುತ್ತಾರೆ ಎಂದು ಹೇಳಿ ಪೊಲೀಸರಿಗೆ ದೂರು ನೀಡಿದ ಬಗ್ಗೆ ಸದರಿ ದೂರನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ. ಸಾಕ್ಷಿಗೆ ಕೆಲವು ಛಾಯಾಚಿತ್ರಗಳನ್ನು ತೋರಿಸಿ ಅದರಲ್ಲಿ ಗೋಡೆಯನ್ನು ನಾನು ಒಡೆದು ಸುಳ್ಳು ದೂರನ್ನು ನೀಡಿರುತ್ತೇನೆ ಅಂದರೆ ಸರಿಯಲ್ಲ.

12) ಪ್ರತಿವಾದಿಯರು ಒಟ್ಟು ಆಸ್ತಿಯ ಕಬ್ಜಾ ವಹಿವಾಟಿನಲ್ಲಿ ಇರುತ್ತಾರೆ ಎಂದರೆ ಸಾಕ್ಷಿಯು ಇರಬಹುದು ಎಂದು ನುಡಿಯುತ್ತಾರೆ. ನನ್ನ ವಾದ ಪತ್ರದ 5 ನೇ ಕಂಡಿಕೆಯಲ್ಲಿ ಸುಳ್ಳು ಸಂಗತಿ ನಮೂದು ಮಾಡಿರುತ್ತೇನೆ ಅಂದರೆ ಸರಿಯಲ್ಲ. ನನ್ನ ಕಂಪೌಂಡ ನಿರ್ಮಾಣಕ್ಕೆ ಪರವಾನಿಗೆ ಪಡೆದುಕೊಂಡಿಲ್ಲ.

13) ಪ್ರತಿವಾದಿಯರು 2011 ರಿಂದ ಇಲ್ಲಿಯವರೆಗೆ ಆಸ್ತಿಯ ಕಬ್ಜಾ ವಹಿವಾಟಿನಲ್ಲಿ ಇದ್ದು ನಾನು ಪ್ರತಿವಾದಿಯರಿಗೆ ತೊಂದರೆ ನೀಡುತ್ತಾ ಬಂದಿದ್ದು ಸುಳ್ಳು ದಾವೆಗಳನ್ನು ಸಲ್ಲಿಸುತ್ತಾ ಬಂದಿರುತ್ತೇನೆ ಅಂದರೆ ಸರಿಯಲ್ಲ. ಪ್ರತಿವಾದಿಯರು ಪರವಾನಿಗೆ ಪಡೆದು ನ್ಯಾಯಿತವಾಗಿ ಕಟ್ಟಡ ನಿರ್ಮಾಣ ಮಾಡಿದ್ದು ನಾನು ಸುಳ್ಳು ಸಂಗತಿಗಳನ್ನು ಕಾಣಿಸಿ ದಾವೆ ಸಲ್ಲಿಸಿರುತ್ತೇನೆ ಅಂದರೆ ಸರಿಯಲ್ಲ. ಅಸಲು ದಾವಾ ಸಂಖ್ಯೆ 399/2017 ನ್ನು ಸಹ ನಾನು ಸೀತವ್ವ ಕೋಂ ಬಸಪ್ಪ ದೊಡ್ಡಮನಿ ರವರ ವಿರುದ್ಧ ಸಲ್ಲಿಸಿದ್ದು ಅದು ಸಹ ನ್ಯಾಯಾಲಯವು ಚೌಕಾಸಿ ಮಾಡಿ ವಜಾ ಮಾಡಿರುತ್ತದೆ ಎಂದರೆ ಸಾಕ್ಷಿಯು ಅದಕ್ಕೆ ಇದಕ್ಕೆ ಸಂಬಂದವಿಲ್ಲ ಎಂದು ನುಡಿಯುತ್ತಾರೆ.

14) ಅಸಲು ದಾವಾ ಸಂಖ್ಯೆ 55/2011 ಹಾಗೂ ಪ್ರಸ್ತುತ ದಾವೆಯ ದಾವಾ ಸ್ವರೂಪ ಒಂದೇ ಎಂದರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಯು ಪ್ರತಿವಾದಿಯರ ಆಸ್ತಿ ಇದ್ದು ಅವರು ಪರವಾನಿಗೆ ಪಡೆದು ನಿರ್ಮಾಣ ಮಾಡುತ್ತಿದ್ದಾರೆ ಅವರು ಯಾವುದೇ ಅತೀಕ್ರಮಣ ಮಾಡಿರುವುದಿಲ್ಲ ಅಂದರೆ ಸರಿಯಲ್ಲ. ಪ್ರತಿವಾದಿಯರು ಅತೀಕ್ರಮಣ ಮಾಡಿದ ಬಗ್ಗೆ ನಕಾಶೆ ಹಾಜರು ಪಡಿಸಿರುತ್ತೇನೆ. ಪ್ರಸ್ತುತ ದಾವಾ ಆಸ್ತಿಯ ವಿವರಣೆಯು ಅಸ್ತಿತ್ವದಲ್ಲಿ ಇಲ್ಲಾ ಅಂದರೆ ಸರಿಯಲ್ಲ.

15) ನನಗೆ ಸೇರಿದ ಆಸ್ತಿಯ ವಿಸ್ತೀರ್ಣ ತೋರಿಸಲು ದಾಖಲೆಗಳನ್ನು ಹಾಜರು ಪಡಿಸಿಲ್ಲ ಸಾಕ್ಷಿಯು ಮುಂದುವರೆದು ಅವರು ಸಹ ಹಾಜರು ಪಡಿಸಿಲ್ಲ. ಪ್ರತಿವಾದಿಯರು ತಮ್ಮ ಆಸ್ತಿಯ

ವಿಸ್ತೀರ್ಣದ ಬಗ್ಗೆ ದಾಖಲೆಗಳನ್ನು ಹಾಜರು ಪಡಿಸಿರುತ್ತಾರೆ ಅಂದರೆ ಸರಿಯಲ್ಲ. ಅಸಲು ದಾವಾ ಸಂಖ್ಯೆ 55/2011 ಹಾಗೂ ಅಸಲು ದಾವಾ ಸಂಖ್ಯೆ 23/2022 ರಲ್ಲಿ ವಿವರಿಸಿದ ಆಸ್ತಿಗಳಲ್ಲಿ ಯಾವ ಆಸ್ತಿಯ ವಿವರಣೆ ನಿಖರವಾದದ್ದು ಎಂದು ನನಗೆ ಹೇಳಲು ಬರುವುದಿಲ್ಲ. ಪ್ರತಿವಾದಿಯರಿಗೆ ತೊಂದರೆ ನೀಡುವ ಉದ್ದೇಶದಿಂದ ಅವರ ವಿರುದ್ಧ ಸುಳ್ಳು ದೂರನ್ನು ನೀಡುತ್ತಾ ಬಂದಿರುತ್ತೇನೆ ಅಂದರೆ ಸರಿಯಲ್ಲ. ಸಾಮಾನ್ಯವಾಗಿ ಪಂಚಾಯಿತಿ ದಾಖಲೆಗಳಲ್ಲಿ ಹೆಸರು ನಮೂದು ಇರುವವರಿಗೆ ಪರವಾನಿಗೆ ನೀಡಲಾಗುತ್ತದೆ ಎಂದರೆ ನನಗೆ ಗೊತ್ತಿಲ್ಲ.

16) ಅಸಲು ದಾವಾ ಸಂಖ್ಯೆ 23/2022 ರ ವಾದ ಪತ್ರದ 11 ನೇ ಕಂಡಿಕೆಯಲ್ಲಿ ನಮೂದು ಮಾಡಿದ ವಿಷಯದ ಬಗ್ಗೆ ಈಗ ನೆನಪಿಲ್ಲ. ಅಸಲು ದಾವಾ ಸಂಖ್ಯೆ 55/2011 ರಲ್ಲಿ ದ್ಯಾಮವ್ವ ತಂದೆ ಲಚ್ಚಪ್ಪ ಕಾಳೆ ರವರಿಗೆ ಮನೆ ನಿರ್ಮಾಣದ ಪರವಾನಿಗೆ ಇದ್ದರು ಸಹ 2011 ರಿಂದ ಇಲ್ಲಿಯವರೆಗೆ ನಾನು ಅವರಿಗೆ ತೊಂದರೆ ನೀಡುತ್ತಾ ಬಂದಿದ್ದು ಇಲ್ಲಿಯವರಿಗೆ ಅವರು ಮನೆ ನಿರ್ಮಾಣ ಮಾಡಲು ಆಗಿರುವುದಿಲ್ಲ ಅಂದರೆ ಸರಿಯಲ್ಲ. ಪ್ರತಿವಾದಿಯರು ಅವಸರದಿಂದ ಮನೆ ನಿರ್ಮಾಣ ಮಾಡುತ್ತಿರುವ ಬಗ್ಗೆ ಛಾಯಾಚಿತ್ರ ತೆಗೆದಿಲ್ಲ ಕಾರಣ ಅದು ರಾತ್ರಿ 12-00 ಗಂಟೆಗೆ ಮಾಡಿರುತ್ತಾರೆ. ಸದರಿ ವಿಷಯವನ್ನು ನಾನು ಸುಳ್ಳು ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ದಾವಾ ಆಸ್ತಿಯ ವಿವರಣೆಯನ್ನು ನಿಖರವಾಗಿ ತೋರಿಸಲು ನಾನು ಯಾವುದೇ ದಾಖಲೆಗಳನ್ನು ಹಾಜರು ಪಡಿಸದೇ ಕಾಲ್ಪನಿಕವಾಗಿ ಸುಳ್ಳು ವಿಸ್ತೀರ್ಣವನ್ನು ತೋರಿಸಿ ನ್ಯಾಯಾಲಯದ ಎದುರು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

ಈ ಹಂತದಲ್ಲಿ ಮುಂದುವರೆದ ಪಾಟೀಸವಾಲಿಗೆ ಸಮಯಾವಕಾಶ ಕೋರಿದ್ದು, ಅಂತಿಮ ಸಮಯಾವಕಾಶ ನೀಡಲಾಯಿತು.

*(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)*

**ಓ. ಹೇ. ಕೇ. ಸರಿ. ಇದೆ.**

(ನವೀನ ಎಫ್. ಡಿಸೋಜಾ)

**ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಮ್.ಎಫ್.ಸಿ.**

**ನವಲಗುಂದ.**